# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 25/03/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಶ್ರೀಮತಿ.ಜ್ಯೋತಿ, ಸ.ಕಾ.ಅ (ಘನತ್ಯಾಜ್ಯ ನಿರ್ವಹಣೆ)<br>4. ಎಸ್.ಚೈತ್ರ ಹಿರಿಯ ಆರೋಗ್ಯ ಪರಿವೀಕ್ಷಕರು<br>5. ಶ್ರೀ.ವಿಜಯರಾಜ್ ಎಸ್, ವಾರ್ಡ್ ನಂ.49, ಕಿರಿಯ ಆರೋಗ್ಯ ಪರಿವೀಕ್ಷಕರು<br>6. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>7. ಮೊಹಮದ್ ರಹಮತುಲ್ಲಾ, ಕೆಲಸ ಪರಿವೀಕ್ಷಕರು<br>8. ಎನ್ ಮೂರ್ತಿ, ಬಿಡಬ್ಲ್ಯೂಎಸ್ಎಸ್‌ಬಿ | 1. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ<br>2. ಪಿ.ಕಿರೀಟಪ್ಪ<br>3. ಕೆ.ಜಾವಿದ್ ಅಹಮದ್<br>4. ಎಂ.ಅಲೇಗ್ಸಾಂಡರ್<br>5. ಸಯದ್ ಘಜಾಲ್<br>6. ರಮೇಶ್<br>7. ಕನ್ನಡ ರಾಮು<br>8. ರವಿಕುಮಾರ್ ಎಸ್ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ದೇವಸ್ಥಾನ /ಶಾಲೆಯ ಬಳಿಯ ಅಂಗಡಿಗಳಲ್ಲಿ ಕಾಫೀ, ಟೀ, ಸಿಗರೇಟ್ ಹಾಗೂ ಗಾಂಜಾ ಸೇವನೆ ನಡೆಯುತ್ತಿದೆ ಈ ಬಗ್ಗೆ ಪೊಲೀಸ್ ಠಾಣೆಗ ದೂರು ನೀಡಬೇಕು, ರಸ್ತೆಯ ಬದಿಯಲ್ಲಿ ಕುಳಿತು ಸಿಗರೇಟ್ ಸೇದುತ್ತಾರೆ. ಹೆಂಗಸರು ಮತ್ತು ಮಕ್ಕಳು ಓಡಾಡಲು ತೊಂದರೆಯಾಗುತ್ತಿದೆ ಎಂದು ಸಮಿತಿ ಸದಸ್ಯರು ತಿಳಿಸಿದರು. ದೇವಸ್ಥಾನ /ಶಾಲೆಯ ಬಳಿಯಲ್ಲಿ ಅಂಗಡಿಗಳವರು ಲೂಸ್ ಸಿಗರೇಟ್ ಮಾರದೇ ಇರುವ ಹಾಗೆ ಆರೋಗ್ಯ ಪರಿವೀಕ್ಷಕರು ಮತ್ತು ಪೊಲೀಸ್ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ರಸ್ತೆ ಬದಿಯಲ್ಲಿ /ಅಂಗಡಿಗಳ ಬಳಿ ಧೂಮಪಾನ ಮಾಡದಂತೆ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

ಪು.ತಿ.ನೋ,

Scanned with CamScanner

ಕೆ.ಎಸ್.ಎಫ್.ಸಿ ಬಡಾವಣೆ ಹಾಗೂ ಇತರೆಡೆ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲ ಕೆಲವು ಕಡೆ ಬೆಳಿಗ್ಗೆ ಮಧ್ಯಾಹ್ನದವರೆವಿಗೂ ಬೀದಿ ದೀಪಗಳು ಉರಿಯುತ್ತಿರುತ್ತವೆ ಈ ಬಗ್ಗೆ ದೂರು ನೀಡಿದರೂ ಸಹ ಕ್ರಮಕೈಗೊಳ್ಳುತ್ತಿಲ್ಲ ಹಾಗೂ ಸದರಿ ದೂರುಗಳನ್ನು ಇತ್ಯರ್ಥಪಡಿಸಿರುವುದಿಲ್ಲವೆಂದು ಸಮಿತಿ ಸದಸ್ಯರು ತಿಳಿಸಿದರು ಮತ್ತು ಸದರಿ ವಾರ್ಡ್‌ನ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ವಾರ್ಡ್ ಕಮಿಟಿ ಸಭೆಗೆ ಹಾಜರಾಗುತ್ತಿಲ್ಲವೆಂದು ತಿಳಿಸಿದರು. ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರನ್ನು ಮೊಬೈಲ್ ಮೂಲಕ ಸಂಪರ್ಕಿಸಲಾಗಿ ಮುಂದಿನ ಸಭೆಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರನ್ನು ಕಳುಹಿಸುವುದಾಗಿ ಹಾಗೂ ದೂರುಗಳನ್ನು ಕೂಡಲೇ ಬಗೆಹರಿಸುವುದಾಗಿ ತಿಳಿಸಿದರು.

ಪಾಟ್‌ಹೋಲ್ಸ್‌ಗಳನ್ನು ಮುಚ್ಚಲಾಗಿದ್ದು, ಶಿಲ್ಟ್ ಅನ್ನು ರಸ್ತೆ ಬದಿಯಲ್ಲಿ ಬಿಟ್ಟಿರುತ್ತಾರೆ ಶಿಲ್ಟ್ ತೆಗೆಯಲು ಟ್ರಾಕ್ಟರ್ / ಗ್ಯಾಂಗ್‌ಮೆನ್‌ಗಳು ಇಲ್ಲ. ಟೆಂಡರ್ ಕರೆಯಲಾಗುತ್ತಿದೆ. ವಾರ್ಡ್ 27 ಮತ್ತು 28 ರಲ್ಲಿ ಡಾಂಬರೀಕರಣ ಕಾರ್ಯ ಮುಗಿದಿದ್ದು, ವಾರ್ಡ್ 49 ರ ಡಾಂಬರೀಕರಣ ಕಾರ್ಯವನ್ನು ಮುಂದಿನ ವಾರ ಪ್ರಾರಂಭಿಸಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿದರು ಇದಕ್ಕೆ ಸಮಿತಿ ಸದಸ್ಯರು ಮಾತನಾಡುತ್ತಾ ಈಗಾಗಲೇ 3 ವರ್ಷಗಳ ಹಿಂದೆಯೇ ಟೆಂಡರ್ ಪ್ರಕ್ರಿಯೆ ಆಗಿದ್ದು ಕಳೆದ ಒಂದು ವರ್ಷದಿಂದ ಇದೇ ರೀತಿ ಹೇಳುತ್ತಿದ್ದಾರೆ ಆದರೆ ರಸ್ತೆಗೆ ಡಾಂಬರೀಕರಣ ಮಾಡುತ್ತಿಲ್ಲ ಎಂಬುದಾಗಿ ದೂರಿರುತ್ತಾರೆ.

ಕಸದ ಸಮಸ್ಯೆ ಬಗೆಹರಿದಿದೆ. ಕಳೆದ ಸಭೆಯಲ್ಲಿ ಚರ್ಚಿಸಿದಂತೆ ಆರೋಗ್ಯ ಪರಿವೀಕ್ಷಕರು ಕಸದ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ ಎಂಬುದಾಗಿ ಸಮಿತಿ ಸದಸ್ಯರು ತಿಳಿಸಿದರು ಆರೋಗ್ಯ ಪರಿವೀಕ್ಷಕರು ಸಮಿತಿ ಸದಸ್ಯರನ್ನು ದೂರುಗಳ ಬಗ್ಗೆ ಭೇಟಿ ಮಾಡಿ ಚರ್ಚಿಸಬೇಕು.

ಶ್ರೀಮತಿ.ಜ್ಯೋತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರು ಮಾತನಾಡುತ್ತಾ, ಯಾವುದೇ ಸಮಸ್ಯೆ ಇದ್ದರೂ ತಮಗೆ ಮೊಬೈಲ್ ಮೂಲಕ ದೂರು ಸಲ್ಲಿಸಿದಲ್ಲಿ ಇತ್ಯರ್ಥಪಡಿಸುವುದಾಗಿ ತಿಳಿಸಿದರು ಹಾಗೂ ಸಾರ್ವಜನಿಕರು ಸ್ಪಂದಿಸಬೇಕು, ರಸ್ತೆಗಳಲ್ಲಿ ಕಸ ಹಾಕಬಾರದು ರಸ್ತೆಯಲ್ಲಿ ಕಸ ಹಾಕುವವರಿಗೆ ತಿಳುವಳಿಕೆ ಹೇಳಬೇಕು ದಂಡ ವಿಧಿಸಬೇಕು ಎಂದು ತಿಳಿಸಿದರು.

ಖಾಯಂ ಪೌರಕಾರ್ಮಿಕರಿಗೆ ವಯಸ್ಸಾಗಿದ್ದು ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಖಾಯಂ ಪೌರಕಾರ್ಮಿಕರು 46 ಜನ, ನೇರ ವೇತನದಡಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರು 26 ಉಳಿಕೆ 10 ಜನ ಸೇರಿ ಒಟ್ಟು 82 ಜನ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಲಭ್ಯವಿರುವ ನೌಕರರನ್ನು ಉಪಯೋಗಿಸಿಕೊಂಡು ವಾರ್ಡ್‌ನ ಸ್ವಚ್ಛತಾ ಕಾರ್ಯ ನಿರ್ವಹಿಸಲಾಗುತ್ತಿದೆ ಎಂಬುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ) ರವರು ತಿಳಿಸಿದರು.

ಮು.ತಿ.ನೋ.

Scanned with CamScanner

ಡಾ॥ ವೆಂಕಟೇಶ್, ಆರೋಗ್ಯ ಅಧಿಕಾರಿಗಳು ಮಾತನಾಡುತ್ತಾ ಶೇ.100 ರಷ್ಟು ವ್ಯಾಕ್ಸಿನೇಷನ್ ಮಾಡಲಾಗಿದೆ. 60 ವರ್ಷಕ್ಕೂ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. 12-14 ವರ್ಷದ ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಲಾಗುತ್ತಿದೆ. 1ನೇ ಡೋಸ್, 2ನೇ ಡೋಸ್ ಕೂಡ ಪಡೆಯಬಹುದು ಕೋವಿಡ್ ಪ್ರಕರಣಗಳು ಕೋವಿಡ್ ರೋಗಿಗಳು ತುಂಬಾ ಕಡಿಮೆಯಾಗಿದ್ದಾರೆ ಪ್ರಕರಣಗಳು ವರದಿಯಾಗುತ್ತಿಲ್ಲ ಎಂಬುದಾಗಿ ಸಭೆಗೆ ಮಾಹಿತಿ ನೀಡಿದರು.

ಸಭೆಯು 12-00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

25.03.22
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner